# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1450 |
| 2. ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್ |
| 3. ಉತ್ತರಿಸುವ ದಿನಾಂಕ | : | 10.03.2022 |
| 4. ಉತ್ತರಿಸುವ ಸಚಿವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಐ.ಟಿ.ಐ. ಕಾರ್ಖಾನೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು? | ಐ.ಟಿ.ಐ ಕಾರ್ಖಾನೆಯಲ್ಲಿ ಒಟ್ಟು 619 ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಅವರ ಪೈಕಿ 379 ಖಾಯಂ ಹಾಗೂ 240 ಗುತ್ತಿಗೆ ಕಾರ್ಮಿಕರಿರುತ್ತಾರೆ. |
| ಆ) | ಕಳೆದ 30 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ 80 ಕಾರ್ಮಿಕರನ್ನು ವಜಾಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಐ.ಟಿ.ಐ ಕಾರ್ಖಾನೆಯು ಕೇಂದ್ರ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಸಾರ್ವಜನಿಕ ಸಂಸ್ಥೆಯಾಗಿರುತ್ತದೆ. ಈ ಸಂಸ್ಥೆಯ ಕಾರ್ಮಿಕ ವಿವಾದಗಳಲ್ಲಿ ರಾಜ್ಯ ಸರ್ಕಾರವು ಮಧ್ಯ ಪ್ರವೇಶಿಸಿ ಕ್ರಮ ವಹಿಸಲು ಕಾರ್ಯ ವ್ಯಾಪ್ತಿಗೆ ಬರುವುದಿಲ್ಲ.<br><br>ಐ.ಟಿ.ಐ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದ 80ಜನ ಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಿರುವ ವಿವಾದದ ಬಗ್ಗೆ ಈಗಾಗಲೇ ಕಾರ್ಯವ್ಯಾಪ್ತಿ ಇರುವ ಕೇಂದ್ರ ಕಾರ್ಮಿಕ ಇಲಾಖೆಯ ಉಪ ಕಾರ್ಮಿಕ ಆಯುಕ್ತರು (ಕೇಂದ್ರ) ಮಧ್ಯೆ ಪ್ರವೇಶಿಸಿ ರಾಜೀ ಸಂಧಾನ ಪ್ರಕ್ರಿಯೆ ಪ್ರಾರಂಭ ಮಾಡಿರುತ್ತದೆ. ರಾಜೀ ಸಂಧಾನ ಪ್ರಕ್ರಿಯೆಯು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ ಇಲಾಖೆಯಲ್ಲಿ ಇನ್ನೂ ಸಹ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ. ಕೈಗಾರಿಕಾ ವಿವಾದಗಳು ಉದ್ಭವಿಸಿದಾಗ ರಾಜೀ ಸಂಧಾನಾಧಿಕಾರಿಗಳು ಕೈಗಾರಿಕಾ ವಿವಾದ ಕಾಯ್ದೆ 1947 ಹಾಗು ಅದರಡಿ ರಚಿತವಾದ ನಿಯಮಗಳನ್ವಯ ಕ್ರಮ ವಹಿಸಿ, ರಾಜೀ ಸಂಧಾನ ಪ್ರಕ್ರಿಯೆ ನಡೆಸಿ ವಿವಾದಗಳನ್ನು ಸೌಹಾರ್ದಯುತವಾಗಿ ಇತ್ಯರ್ಥ ಪಡಿಸಲು ಕಾರ್ಯವ್ಯಾಪ್ತಿಯುಳ್ಳ ರಾಜೀ ಸಂಧಾನಾಧಿಕಾರಿಗಳು ಸಾಧ್ಯವಿರುವ ಎಲ್ಲಾ ರಾಜೀ ಸಂಧಾನ ಪ್ರಯತ್ನಗಳನ್ನು ನಡೆಸುವ ಪದ್ಧತಿ ಇರುತ್ತದೆ. ಪ್ರಸ್ತುತ ಈ ಪ್ರಕ್ರಿಯೆ ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖೆಯ ರಾಜೀ ಸಂಧಾನಾಧಿಕಾರಿಯಾದ ಉಪ ಮುಖ್ಯ ಕಾರ್ಮಿಕ ಆಯುಕ್ತರು (ಕೇಂದ್ರ) ಇವರಲ್ಲಿ ಚಾಲ್ತಿಯಲ್ಲಿದ್ದು, ವಿವಾದದ ಫಲಿತಾಂಶ ನಿರೀಕ್ಷಿಸಲಾಗಿದೆ. ಒಂದು ವೇಳೆ ಸಂಬಂಧಿತ ಕೈಗಾರಿಕಾ ವಿವಾದಗಳು ರಾಜೀ ಸಂಧಾನಾಧಿಕಾರಿಯವರ ಮಧ್ಯಸ್ಥಿಕೆಯಲ್ಲಿ ಒಪ್ಪಂದದಲ್ಲಿ ಇತ್ಯರ್ಥವಾಗದಿದ್ದಲ್ಲಿ, ಅಂತಹ ವಿವಾದವನ್ನು ಸಂಧಾನ ವಿಫಲವೆಂದು ಪರಿಗಣಿಸಿ ರಾಜೀ ಸಂಧಾನಾಧಿಕಾರಿಯವರು ಹೆಚ್ಚಿನ ನ್ಯಾಯ ನಿರ್ಣಯಕ್ಕೆ ಕಳುಹಿಸಲು ಸೂಕ್ತ ಪ್ರಾಧಿಕಾರಕ್ಕೆ/ಕಾರ್ಮಿಕ ನ್ಯಾಯಾಲಯಕ್ಕೆ/ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗುತ್ತದೆ. ಈ ರೀತಿ ರಾಜೀ ಸಂಧಾನಾಧಿಕಾರಿಯವರು ಸಲ್ಲಿಸುವ ಸಂಧಾನ ವಿಫಲ ವರದಿಯ ಆಧಾರದಲ್ಲಿ ಆಯಾ ಸೂಕ್ತ ಪ್ರಾಧಿಕಾರವು ವಿವಾದವನ್ನು ನ್ಯಾಯ ನಿರ್ಣಯಕ್ಕೆ ಕಾರ್ಮಿಕ ನ್ಯಾಯಾಲಯ/ಔದ್ಯಮಿಕ ನ್ಯಾಯಾಲಯ ಶಿಫಾರಸ್ಸು ಮಾಡಬೇಕಾಗುತ್ತದೆ. ಕಾರ್ಯವ್ಯಾಪ್ತಿಯುಳ್ಳ ಈ ನ್ಯಾಯಾಲಯಗಳು ಕೈಗಾರಿಕಾ ವಿವಾದ ಕಾಯ್ದೆ, 1947 ರ ಪ್ರಾವಧಾನಗಳನ್ವಯ ಐತೀರ್ಪು ನೀಡಬೇಕಾಗುತ್ತದೆ. ಈ ರೀತಿ ಕಾರ್ಮಿಕ ನ್ಯಾಯಾಲಯವು ನೀಡುವ ಐತೀರ್ಪು ಎಲ್ಲಾ ಪಕ್ಷದವರಿಗೆ ಅನ್ವಯಿಸಲಿದ್ದು, ಅದನ್ನು ಪಾಲಿಸಬೇಕಾಗುತ್ತದೆ. |
| ಇ) | ಸದರಿ ಕಾರ್ಮಿಕರ ವಜಾಗೊಳಿಸಿರುವ ಆದೇಶವನ್ನು ವಾಪಸ್ ಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

ಸಂಖ್ಯೆ: ಕಾಇ 167 ಐಡಿಎಂ 2022

(ಅರಬೈಲ್ ಶಿವರಾಮ್ ಹೆಬ್ಬಾರ್)
ಕಾರ್ಮಿಕ ಸಚಿವರು